# <u>ಕರ್ನಾಟಕ ಲೋಕಾಯುಕ್ತ</u>

ಕಂಪ್ಲೆಂಟ್/ಉಪಲೋಕ್/ಬಿಜಿಎಂ/1337/2021
ಮಂಡನಾಧಿಕಾರಿಗಳ ಶಾಖೆ : ಎಆರ್‌ಇ-1

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 21-04-2022.

26

## <u>ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ</u>

**ವಿಷಯ: ಶ್ರೀ ಸುಹಾಸ ಶಂಕರ ಇಂಗಳೆ, ತಹಶೀಲ್ದಾರ್, ಮುದೋಳ, ಮುದೋಳ ತಾ: ಬಾಗಲಕೋಟೆ ಜಿ:** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಬಾಗಲಕೋಟೆ ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ 1) **ಶ್ರೀ ಪ್ರಕಾಶ ತಮ್ಮಣ್ಣ ಕಂದಗಲ್, ಪ್ರ.ದ.ಸ, ತಹಸೀಲ್ದಾರ್ ಕಛೇರಿ, ಮುದೋಳ, ಮುದೋಳ ತಾ: ಬಾಗಲಕೋಟೆ ಜಿಲ್ಲೆ, 2). ಶ್ರೀ ಸುಹಾಸ ಶಂಕರ ಇಂಗಳೆ, ತಹಶೀಲ್ದಾರ್, ಮುದೋಳ, ಮುದೋಳ ತಾ: ಬಾಗಲಕೋಟೆ ಜಿ:** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಪರಮಾನಂದ ಮಂಟೂರ, ಬಿನ್ ಶಿವಲಿಂಗಪ್ಪ ಮಂಟೂರ, ಮುಗಳಖೋಡ, ತಾ: ಮುಧೋಳ, ಬಾಗಲಕೋಟೆ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. ದೂರುದಾರರು ತಮ್ಮ ದೂರಿನಲ್ಲಿ, 2016 ನೇ ಸಾಲಿನಲ್ಲಿ ಮುಧೋಳ ತಾಲ್ಲೂಕಿನ ಕೆಲವು ಹಳ್ಳಿಗಳು ಬರ ಪ್ರದೇಶವೆಂದು ಘೋಷಣೆಯಾದ ನಂತರ ಕುಡಿಯುವ ನೀರಿನ ಸಮಸ್ಯೆಗೆ ಒಳಗಾದ ಗ್ರಾಮಗಳಿಗೆ ಟ್ರಾಕ್ಟರ್ ಟ್ಯಾಂಕರ್ ಮೂಲಕ ನೀರು ಸರಬರಾಜ ಮಾಡಲು 2ನೇ ಎದುರುದಾರರಾದ ತಹಶೀಲ್ದಾರ ಮುಧೋಳ ರವರು, ಆದೇಶ ಮಾಡಿರುತ್ತಾರೆ. ಆದರಿಂದ ದೂರುದಾರರು ಮತ್ತು ಅವರ ಸಹೋದರರು ತಮ್ಮ ಮುಗಳಖೋಡ ಗ್ರಾಮದಲ್ಲಿ ಹಾಗೂ ಹೊಲದಲ್ಲಿ ಇರುವ ಮನೆಗಳಿಗೆ ಟ್ರಾಕ್ಟರ್ ಟ್ಯಾಂಕರ್ ಮೂಲಕ ನೀರು ಹಾಕಲು ಪರವಾನಗಿ ಕೊಟ್ಟಿದ್ದರು. ಅದರಂತೆ ದೂರುದಾರರು ಹಾಗೂ ಅವರ

ಸಹೋದರರು ಎರಡು ತಿಂಗಳವರೆಗೆ ಅವರ ಟ್ರಾಕ್ಟರ ಟ್ಯಾಂಕರ್ ಗಳಿಗೆ ಸ್ವಂತ ಡೀಸಲ್ ಹಾಕಿಸಿಕೊಂಡು ನೀರು ಸರಬರಾಜು ಮಾಡಿರುತ್ತಾರೆ. ಜುಲೈ ತಿಂಗಳಲ್ಲಿ ಟ್ರಾಕ್ಟರ ಟ್ಯಾಂಕರ್ ಮೂಲಕ ಬಾಡಿಗೆ ಸಲುವಾಗಿ ದೂರುದಾರರು ಮತ್ತು ಇತರರು ಕೂಡಿ 2ನೇ ಎದುರುದಾರರನ್ನು ಬೇಟಿಯಾದಾಗ 2ನೇ ಎದುರುದಾರರಾದ ನೀವು ಎಲ್ಲರೂ ಕೂಡಿ ಶೇಕಡ 11% ರಂತೆ ಲಂಚದ ಹಣ ಬೇಡಿಕೆ ಇಟ್ಟು ಕೊನೆಗೆ ಶೇಕಡ 7% ಕ್ಕೆ ಒಪ್ಪಿರುತ್ತಾರೆ. ಎಲ್ಲಾ ಟ್ರಾಕ್ಟರ ಟ್ಯಾಂಕರ್ ಗಳ ಮಾಲೀಕರ ಪರವಾಗಿ ದೂರುದಾರರ ತಮ್ಮನ ಮಗ ಸಂಗಪ್ಪನಿಗೆ ಹಣದ ವ್ಯವಹಾರ ಮಾಡುವಂತೆ 2ನೇ ಎದುರುದಾರರು ತಿಳಿಸಿದರು. ದೂರುದಾರರ ಜೊತೆ 2ನೇ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಬಂಧ ಸಂಭಾಷಣೆಯನ್ನು ಸಂಗಪ್ಪನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. 1ನೇ ಎದುರುದಾರರು, ಮೊದಲು ದೂರುದಾರರ ಹೆಸರಿಗೆ ಚೆಕ್ ರೂ. 51,000/- ಕೊಟ್ಟು, ಇದನ್ನು ಕ್ಯಾಶ್ ಮಾಡಿಸಿ, ರೊಕ್ಕ ತಂದುಕೊಟ್ಟು ಉಳಿದ ಚೆಕ್ಕನ್ನು ಒಯ್ಯರಿ ಅಂತ ಹೇಳಿರುತ್ತಾರೆ. ಅದರಂತೆ, ದೂರುದಾರರು 51,000/- ರೂ. ಚೆಕ್‌ನ್ನು ಐ.ಸಿ.ಐ.ಸಿ.ಐ ಬ್ಯಾಂಕ್‌ನಲ್ಲಿ ಕ್ಯಾಶ್ ಮಾಡಿ, 50,000/- ರೂ.ಗಳನ್ನು 1ನೇ ಎದುರುದಾರರಿಗೆ ಕೊಟ್ಟಿರುತ್ತಾರೆ. ಆಗ 1ನೇ ಎದುರುದಾರರು ಉಳಿದ 50,000/- ರೂ. ಹಾಗೂ 69,900/- ರೂ.ಗಳ ಚೆಕ್ಕುಗಳನ್ನು ಕೊಟ್ಟಿರುತ್ತಾರೆ. ಇದಲ್ಲದೆ, ಬಾಡಿಗೆ ಬಾಬ್ತು 16,800/- ರೂ.ಗಳು ದೂರುದಾರರಿಗೆ ಹಾಗೂ ದೂರುದಾರರ ತಮ್ಮ ಭೀಮನಂದ ಇವರಿಗೆ 9300/- ಚೆಕ್ಕು ಕೊಡುವುದು ಬಾಕಿ ಉಳಿದಿತ್ತು. ದಿನಾಂಕ: 17-12-2016 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ 2ನೇ ಎದುರುದಾರರನ್ನು ಭೇಟಿ ಮಾಡಿ, ಟ್ರಾಕ್ಟರ ಟ್ಯಾಂಕರ್ ಬಾಡಿಗೆ ಕೇಳಿದಾಗ ಅವರು ಚೆಕ್ಕು ಸಹಿ ಮಾಡಿ ರೆಕಾರ್ಡ್ ಆಫೀಸಿನಲ್ಲಿ ಕೊಟ್ಟಿರುತ್ತೆ, ಹೋಗಿ 1ನೇ ಎದುರುದಾರರನ್ನು ವಿಚಾರಿಸಿ ಎಂದು ಹೇಳಿದಾಗ ದೂರುದಾರರು ಮತ್ತು ಸಂಗಪ್ಪ ಇಬ್ಬರು 1ನೇ ಎದುರುದಾರರನ್ನು ಭೇಟಿಯದಾಗ, ಉಳಿದ ಟ್ರಾಕ್ಟರ್ ಟ್ಯಾಂಕರ್ ಮಾಲೀಕರಿಂದ 12,000/- ರೂ.ಗಳನ್ನು ಪಡೆದು ನಮಗೆ 10,000/- ರೂ.ಗಳನ್ನು ಕೊಟ್ಟು, ಉಳಿದ ಚೆಕ್ಕು ಅಬ್ದುಲ್ ಕಡೆಗೆ (1ನೇ ಎದುರುದಾರರ ಕೈ ಕೆಳಗೆ ಕೆಲಸ ಮಾಡುವ ಖಾಸಗಿ ವ್ಯಕ್ತಿ) ಹೋಗಿ ಪಡೆದುಕೊಳ್ಳಿ ಎಂದು ಹೇಳಿದರು. ನಂತರ, ನನಗೆ ಬರಬೇಕಾದ 16,800/- ಚೆಕ್ಕು ಕೊಡದೆ ಲಂಚದ ಬೇಡಿಕೆ ಇಟ್ಟಿರುತ್ತಾರೆ. ಲಂಚದ ಹಣ ಕೊಡಲು ಇಷ್ಟವಿಲ್ಲದ ಪ್ರಯುಕ್ತ ದೂರುದಾರರು, ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ಬಾಗಲಕೋಟೆ, ಇವರಿಗೆ ದೂರು ನೀಡಿದ್ದು, ಹಾಗೂ ದೂರಿನ ಜೊತೆ ದಿ: 17-12-2016 ರಂದು 1ನೇ ಎದುರುದಾರರ ಜೊತೆ ಲಂಚದ ಹಣ ಬೇಡಿಕೆ ಇಟ್ಟ ಸಂಬಂಧವಾಗಿ ಸಂಭಾಷಣೆಯನ್ನು ದೂರುದಾರರು ತನ್ನ ಮೊಬೈಲ್‌ನ ವಾಯ್ಸ್ ರೆಕಾರ್ಡ್ ಮಾಡಿಕೊಂಡಿರುವುದನ್ನು ಹಾಜರುಪಡಿಸಿರುತ್ತಾರೆ. ಸದರಿ ದೂರು ಮೊ.ಸಂಖ್ಯೆ: 3/2016 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7ರ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

3. ದಿನಾಂಕ: 21-12-2016 ರಂದು, ತನಿಖಾಧಿಕಾರಿ, ಬಾಗಲಕೋಟೆ ಇವರು ಪಂಚರಾದ ಶ್ರೀ ಆನಂದ, ಪಂಚ-1, ಸಂಗಮೇಶ ಪಂಚ-2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 10,000/- (ಹಣದ ಡಿನಾಮಿನೇಷನ್ 2000 x 5) ಗಳನ್ನು ಹಾಗೂ ಲಂಚದ ಹಣಕ್ಕೆ ಸಂಭಾಷಣೆ

ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಪಂಚರು ಲಂಚದ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು ವಿವರವನ್ನು ಬಿಳಿ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ ಪಂಚ-2 ಸಂಗಮೇಶ, ಇವರು ಪೋಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲೀನ್ ಪೌಡರ್ ಲೇಪಿಸಿದ ಹಣವನ್ನು ಎಣಿಸಿ ದೂರುದಾರರ ಶರ್ಟ್ ಮೇಲಿನ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ಹೆಗಲಿನ ಮೇಲಿನ ಟವಲ್‌ನ್ನು ಜಾಡಿಸಿ ಹಾಕಿಕೊಳ್ಳುವುದರ ಮೂಲಕ ಸನ್ನೆ ಮಾಡಿ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಇವರ ಜೊತೆ ನೆರಳು ಸಾಕ್ಷಿ ಪಂಚ-1 ಶ್ರೀ ಆನಂದ ದೂರುದಾರರ ಜೊತೆಗೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ಸೂಚಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ತಮ್ಮ ವಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಿಕೊಂಡು ಹೋಗುವಂತೆ ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. 2ನೇ ಎದುರುದಾರರಾದ ನಿಮ್ಮನ್ನು ಹಾಗೂ ಅಬ್ದುಲ್ (1ನೇ ಎದುರುದಾರರ ಕೈ ಕೆಳಗೆ ಕೆಲಸ ಮಾಡುವ ಖಾಸಗಿ ವ್ಯಕ್ತಿ) ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಈ ಸಂಬಂಧವಾಗಿ ಪಂಚರ ಸಮಕ್ಷಮ ಪ್ರಾಯೋಗಿಕ ಪಂಚನಾಮೆಯನ್ನು ದಿನಾಂಕ: 21-12-2016 ರಂದು ಬೆಳಿಗ್ಗೆ 13.45 ರಿಂದ 14.45 ರವರೆಗೆ ಬರೆದಿರುತ್ತಾರೆ.

4. ಅದೇ ದಿನ ಅಂದರೆ, ದಿನಾಂಕ: 21-12-2016 ರಂದು ದೂರುದಾರರು ಮತ್ತು ಅವರ ಜೊತೆ ಅಣ್ಣನ ಮಗ ಸಂಗಪ್ಪ ಹಾಗೂ ನೆರಳು ಸಾಕ್ಷಿ ಪಂಚ-2 ರವರುಗಳು, ರೆಕಾರ್ಡ್ ರೂಂ. ನಲ್ಲಿದ್ದ 1ನೇ ಎದುರುದಾರರು ಭೇಟಿ ಮಾಡಲು ಹೋದಾಗ ಅವರು ಕಛೇರಿನಲ್ಲಿ ಇರಲಿಲ್ಲ. ನಂತರ ದೂರುದಾರರು ಅಬ್ದುಲ್ ರವರಿಗೆ ಪೋನ್ ಮಾಡಿದಾಗ ಹಳೆ ಆಫೀಸ್‌ಗೆ ಬರುವಂತೆ ತಿಳಿಸಿದರು. ಅದರಂತೆ ದೂರುದಾರರು ಮತ್ತು ಇತರರು ಅಬ್ದುಲ್ (1ನೇ ಎದುರುದಾರರ ಕೈ ಕೆಳಗೆ ಕೆಲಸ ಮಾಡುವ ಖಾಸಗಿ ವ್ಯಕ್ತಿ) ಇವರನ್ನು ಭೇಟಿ ಮಾಡಿದಾಗ ಅಬ್ದುಲ್ 1ನೇ ಎದುರುದಾರರು ಹೇಳಿದಂತೆ ರೊಕ್ಕ ಕೊಟ್ಟು ಒಯ್ಯರಿ ಎಂದು ಹೇಳಿದಾಗ ದೂರುದಾರರು ತನ್ನ ಬಳಿ ಇದ್ದ ಪಿನಾಪ್ತಿಲಿನ್ ಪೌಡರ್ ಲೇಪಿತ ಲಂಚದ ಹಣವನ್ನು ಅಬ್ದುಲ್ ಕೈಗೆ ಕೊಟ್ಟರು. ಆಗ ಸದರಿ ಹಣವನ್ನು ಅಬ್ದುಲ್ ಎರಡು ಕೈಗಳಿಂದ ಎಣಿಸಿ ತನ್ನ ಪ್ಯಾಂಟಿನ ಬಲಗಡೆ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ನಿಗದಿತ ಸೂಚನೆಯನ್ನು ತನಿಖಾಧಿಕಾರಿಗೆ ಕೊಟ್ಟಾಗ ಅವರು ಸ್ಥಳಕ್ಕೆ ಬಂದಾಗ ದೂರುದಾರರು ಲಂಚದ ಹಣವನ್ನು ಪಡೆದ ಅಬ್ದುಲ್ ನನ್ನು ತೋರಿಸಿರುತ್ತಾರೆ. ತನಿಖಾಧಿಕಾರಿ ತನ್ನನ್ನು ಪರಿಚಯಿಸಿಕೊಂಡು ಪ್ರಕರಣ ದಾಖಲಾಗಿರುವ ಬಗ್ಗೆ ತಿಳಿಸಿ ತನಿಖೆ ಪ್ರಾರಂಬಿಸಿ ಅಬ್ದುಲ್‌ನ ಎರಡು ಕೈ ಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣಕ್ಕೆ ಬದಲಾವಣೆಯಾಗಿರುತ್ತದೆ ಹಾಗೂ ದೂರುದಾರರಿಂದ ಪಡೆದ ಲಂಚದ ಹಣವನ್ನು ಸಹ ಅಬ್ದುಲ್ ನಿಂದ ಅಮಾನತ್ತುಪಡಿಸಿಕೊಂಡು ಮೌಲ್ಯ ಹಾಗೂ ನಂಬರುಗಳನ್ನು ತಾಳೆ ಮಾಡಿಕೊಂಡು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ಅಬ್ದುಲ್‌ನ ಪ್ಯಾಂಟಿನ ಬಲ ಭಾಗದ ಜೇಬಿನ ಒಳಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿ ಗುಲಾಬಿ ಬಣಕ್ಕೆ ಬದಲಾವಣೆಯಾಗಿರುತ್ತದೆ.

ತನಿಖಾಧಿಕಾರಿಯು ಲಂಚದ ಹಣ ಪಡೆದ ಅಬ್ದುಲ್‌ನನ್ನು ಸಮಜಾಯಿಷಿಕೆಯನ್ನು ನೀಡುವಂತೆ ಹೇಳಿದಾಗ, ಆತ ತನ್ನ ಹೇಳಿಕೆಯಲ್ಲಿ "ತಾನು ಅಭಿಲೇಖಾಲಯದಲ್ಲಿ 2-ವರ್ಷಗಳಿಂದ ದಿನಗೂಲಿ ನೌಕರನಾಗಿ ಕೆಲಸ ಮಾಡುತ್ತಿದ್ದು, ದಿ: 21/12/2016ರಂದು ಪ್ರಕಾಶ ಕಂದಗಲ್ಲ ಸಾಹೇಬರು ಮಧ್ಯಾಹ್ನದವರೆಗೆ ಕಚೇರಿಯಲ್ಲಿದ್ದು, ನಂತರ ಯಾವುದೋ ಕೆಲಸದ ಮೇಲೆ ಹೊರಗೆ ಹೋಗುವ ಸಮಯದಲ್ಲಿ ನನಗೆ ಶ್ರೀ ಪರಮಾನಂದ ಮಂಟೂರ, ಇವರ ಹೆಸರಿಗೆ ಇರುವ 16,650/- ರೂ. ಚೆಕ್‌ನ್ನು ಅವರು ಬಂದಾಗ ಅವರ ಹತ್ತಿರ 10,000/- ರೂ.ಗಳನ್ನು ಪಡೆದುಕೊಂಡು ಚೆಕ್ ಮುಟ್ಟಿದ ಬಗ್ಗೆ ರಿಜಿಸ್ಟರ್‌ನಲ್ಲಿ ಸಹಿ ಪಡೆಯುವಂತೆ ತಿಳಿಸಿರುತ್ತಾರೆ. ಅದರಂತೆ ಸಂಜೆ 4-40ರ ಸಮಯದಲ್ಲಿ ಶ್ರೀ ಪರಮಾನಂದ ಮಂಟೂರ ಬಂದು ಕಂದಗಲ್ಲು ಸಾಹೇಬರ ಬಗ್ಗೆ ಕೇಳಲಾಗಿ ಆಗ ನಾನು ಕಂದಗಲ್ಲು ಸಾಹೇಬರಿಗೆ ಫೋನ್ ಮಾಡಿ ಪರಮಾನಂದ ಮಂಟೂರ ಬಗ್ಗೆ ತಿಳಿಸಿದಾಗ, ಅವರು ಬೆಳಿಗ್ಗೆ ಹೇಳಿದ ಹಾಗೆ 10,000/- ರೂ.ಗಳನ್ನು ಪಡೆದುಕೊಂಡು ಚೆಕ್ ಕೊಡು ಅಂತಾ ಹೇಳಿದರು. ಅದರಂತೆ ನಾನು ಚೆಕ್ ಕೊಟ್ಟು ರಿಜಿಸ್ಟರ್‌ನಲ್ಲಿ ಸಹಿ ಪಡೆದಿರುತ್ತೇನೆ. ಅದರಂತೆ ಕಂದಗಲ್ಲು ಸಾಹೇಬರು ಮತ್ತು ತಹಶೀಲ್ದಾರ್ ಸಾಹೇಬರು ಮಿಲಾಪಿಯಾಗಿ ಪರಮಾನಂದ ಮಂಟೂರ ಇವರಿಂದ ಹಣ ಪಡೆದುಕೊಳ್ಳಲು ತಿಳಿಸಿದ ಮೇರೆಗೆ ನಾನು ಹಣ ಸ್ವೀಕರಿಸಿದ್ದೇನೆ ಎಂದು ಹೇಳಿಕೆ ನೀಡಿರುತ್ತಾರೆ". ನಂತರ, ತನಿಖಾಧಿಕಾರಿಯವರು ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಶ್ರೀ ಅಬ್ದುಲ ರವರನ್ನು ದಸ್ತಗಿರಿ ಮಾಡಿರುತ್ತಾರೆ. ನಂತರ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡು ಟ್ರಾಪ್ ಪಂಚನಾಮೆಯನ್ನು ದಿ: 21/12/2016 ರಂದು 17.15 ರಿಂದ 23.30 ರವರೆಗೆ ಪಂಚರ ಸಮಕ್ಷಮ ಬರೆದಿರುತ್ತಾರೆ.

5. ತನಿಖಾಧಿಕಾರಿಯು 2ನೇ ಎದುರುದಾರರನ್ನು ವಿಚಾರಿಸಿದಾಗ, "ಅವರು ತನ್ನ ಹೇಳಿಕೆಯಲ್ಲಿ ತಾನು ಮುಧೋಳ ತಹಶೀಲ್ದಾರ್ ಅಂತ 01/11/2014ರಿಂದ ಹಾಜರಾಗಿರುತ್ತೇನೆ, ನಾನು ಯಾರಿಂದಲೂ ಬೇಡಿಕೆ ಇಡುವ ಪ್ರವೃತ್ತಿ ನನ್ನಲ್ಲಿ ಇರುವುದಿಲ್ಲ. ಪ್ರಸ್ತುತ ಪ್ರಕರಣದಲ್ಲಿ ಚೆಕ್ ಬಿಡುಗಡೆಗೆ ಯಾವುದೇ ಹಣದ ಬೇಡಿಕೆ ಇಟ್ಟಿರುವುದಿಲ್ಲ. ನಾನು ಸದರಿ ಪ್ರಕರಣದಲ್ಲಿ 16,550/- ರೂ. ಗಳ ಚೆಕ್‌ನ್ನು ದಿ.09/12/2016ರಂದು ವಿಷಯ ನಿರ್ವಾಹಕರಿಗೆ (1ನೇ ಎದುರುದಾರರು) ಸಹಿ ಮಾಡಿ ನೀಡಿರುತ್ತೇನೆ. ಈ ಪ್ರಕರಣದಲ್ಲಿ ವಿಷಯ ನಿರ್ವಾಹಕರು ಅನವಶ್ಯಕವಾಗಿ ಬೇಡಿಕೆ ಇಟ್ಟಿರಬೇಕೆನಿಸಿದ್ದು, ಆದರೆ ನನ್ನದು ಇದರಲ್ಲಿ ಪಾತ್ರ ಇರುವುದಿಲ್ಲ ಇತ್ಯಾದಿ ಹೇಳಿಕೆ ನೀಡಿರುತ್ತಾರೆ".

6. ನಂತರ, ತನಿಖಾಧಿಕಾರಿಯು 1ನೇ ಎದುರುದಾರರನ್ನು ದಿನಾಂಕ: 31/01/2017ರಂದು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ಸಮಜಾಯಿಷಿಕೆಯನ್ನು ನೀಡುವಂತೆ ಕೇಳಿದಾಗ, "ಅವರು ತಾನು 21/12/2016ರಂದು ಮಧ್ಯಾಹ್ನ ನನಗೆ ಆರಾಮ್ ಇಲ್ಲದ ಕಾರಣ ನಾನು ತಹಶೀಲ್ದಾರರ ಮೌಖಿಕ ಒಪ್ಪಿಗೆ ಪಡೆದು ಊರಿಗೆ ತೆರಳಿದ್ದು, ತದನಂತರ ನನಗೆ ವಿಷಯ ತಿಳಿದು, ನಾನು ಕೋರ್ಟ್‌ಗೆ ಬೇಲ್ ಪಡೆಯಲು ಹೋಗಿ ನಂತರ ಬೇಲ್ ಪಡೆದು ತಮ್ಮ ಠಾಣೆಗೆ ಹಾಜರಾಗಿರುತ್ತೇನೆ. ಸದರಿ ಪ್ರಕರಣಕ್ಕೆ ಸಂಬಂದಿಸಿದಂತೆ ನಾನು ಯಾರಿಗೂ ದುಡ್ಡು ತೆಗೆದುಕೊಳ್ಳಲು ಹೇಳಿರುವುದಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ".

7. ದಿನಾಂಕ: 21-12-2016 ರಂದು ಟ್ರ್ಯಾಪ್ ವೇಳೆಯಲ್ಲಿ ದೂರುದಾರರು, 1ನೇ ಮತ್ತು 2ನೇ ಎದುರುದಾರರು ನಡೆಸಿದ ಸಂಭಾಷಣೆಯ ಸಿಡಿಯನ್ನು ಲ್ಯಾಪ್ ಟ್ಯಾಪ್ ನಲ್ಲಿ ಹಾಕಿ ಶ್ರೀ ರವೀಂದ್ರಪ್ಪ ಉಪ-ವಿಭಾಗಧಿಕಾರಿಗಳು, ಜಮಖಂಡಿ, ಇವರಿಗೆ ಕೇಳಿಸಿದಾಗ ಸದರಿಯವರು 1ನೇ ಮತ್ತು 2ನೇ ಎದುರುದಾರರ ನಿಮ್ಮ ಧ್ವನಿಯನ್ನು ಗುರುತಿಸಿ ದೃಢೀಕರಣ ನೀಡಿರುತ್ತಾರೆ. ತನಿಖಾಧಿಕಾರಿಯವರು,

ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ 1 ಮತ್ತು 2ನೇ ಎದುರುದಾರರ ಧ್ವನಿಗೆ ಹಾಗೂ 1 ಮತ್ತು 2ನೇ ಎದುರುದಾರರ ಮಾಡರಿ ಧ್ವನಿಗೆ ಹೋಲಿಕೆ ಸಂಬಂಧವಾಗಿ ವರದಿಯನ್ನು ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತಾರೆ.

8. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ನಿಮ್ಮಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

9. ಗೌರವಾನ್ವಿತರ ಆದೇಶದ ಅನ್ವಯ, ಎದುರುದಾರರಿಗೆ ದಿ: 13/09/2021 ರಂದು 1 ಮತ್ತು 2ನೇ ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, 1ನೇ ಎದುರುದಾರರು ತನ್ನ ವಿವರಣೆಯನ್ನು ದಿ: 12/01/2022 ರಂದು ಹಾಗೂ 2ನೇ ಎದುರುದಾರರು ದಿ: 7/12/2021 ರಂದು ಸಲ್ಲಿಸಿರುತ್ತಾರೆ. 1ನೇ ಎದುರುದಾರರ ವಿವರಣೆಯನ್ನು ಪರಿಶೀಲಿಸಲಾಗಿ, 1ನೇ ಎದುರುದಾರರು ದಿ: 21/12/2016 ರಂದು ಎ.ಸಿ.ಬಿ. ಯವರು ದಾಳಿ ನಡೆದ ದಿನ ಅವರಿಗೆ ಉಷಾರಿಲ್ಲದ ಕಾರಣ, ಮೌಖಿಕ ಅನುಮತಿ ಪಡೆದು ಮಧ್ಯಾಹ್ನ ಕಾರ್ಯಾಲಯದಿಂದ ತೆರಳಿರುತ್ತೇನೆ. ತಾನು ಯಾರಿಗೂ ಹಣ ಪಡೆಯಲು ತಿಳಿಸಿರುವುದಿಲ್ಲ. ಹಾಗೂ ತನ್ನ ವಿರುದ್ಧ ಮಾನ್ಯ ಶಿಸ್ತು ಪ್ರಾಧಿಕಾರಿಗಳು, ಬಾಗಲಕೋಟೆ, ಇವರು ಅನುಬಂಧ 1 ರಿಂದ 4ರ ಆಪಾದನೆ ಪಟ್ಟಿ ಜಾರಿ ಮಾಡಿ, ಇಲಾಖಾ ವಿಚಾರಣೆ ನಡೆಸುತ್ತಿರುತ್ತಾರೆಂದು ತಿಳಿಸಿರುತ್ತಾರೆ. ಸದರಿ ದಾಖಲೆಯನ್ನು ಪರಿಶೀಲಿಸಲಾಗಿ 1ನೇ ಎದುರುದಾರರು ಇಲಾಖಾ ವಿಚಾರಣೆ ನಡೆದಯುತ್ತಿರುವುದರ ಬಗ್ಗೆ ಹಾಗೂ ಯಾವ ಹಂತದಲ್ಲಿ ವಿಚಾರಣೆ ಇದೆ ಇನ್ನುವುದರ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ 2ನೇ ಎದುರುದಾರರ ವಿವರಣೆಯನ್ನು ಪರಿಶೀಲಿಸಲಾಗಿ, ಇವರು ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 1 ಹಾಗೂ ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 2(i) ರಿಂದ 2(xii), (xiv), ಕಂಡಿಕೆ 3ರ ಅಂಶಗಳನ್ನು ಸಾರಸಗಟವಾಗಿ ಅಲ್ಲಗಳೆದಿರುತ್ತಾರೆ. ಹಾಗೂ ತಾನು ದೂರುದಾರರಿಂದ ಯಾವುದೇ ಲಂಚದ ಹಣವನ್ನು ಕೇಳಿರುವುದಿಲ್ಲ. ತನ್ನ ವಿರುದ್ಧ ಬಾಗಲಕೋಟೆ ವಿಶೇಷ ಹಾಗೂ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ವಿಶೇಷ ಮೊ.ಸಂಖ್ಯೆ: 66/2018 ರಲ್ಲಿ ದಾಖಲಾಗಿದ್ದು, ಅದು ಇನ್ನೂ ಮುಕ್ತಾಯವಾಗಿರುವುದಿಲ್ಲ. ಹೀಗಿರುವಲ್ಲಿ ವಿಶೇಷ ನ್ಯಾಯಾಲಯದ ಪ್ರಕರಣ ಮುಗಿಯುವವರೆವಿಗೂ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಬಾರದಾಗಿ ಕೋರಿರುತ್ತಾರೆ. 1 ಮತ್ತು 2ನೇ ಎದುರುದಾರರು ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗೂ ಯಾವುದೇ ಸೂಕ್ತ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಅವರ ವಿರುದ್ಧ ಇಲಾಖಾ ವಿಚಾರಣೆ ಮಾಡದೆ ಇರಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

ಮುಂದುವರೆದು, 1ನೇ ಎದುರುದಾರರಾದ 1) **ಶ್ರೀ ಪ್ರಕಾಶ ತಮ್ಮಣ್ಣ ಕಂದಗಲ್, ಪ್ರ.ದ.ಸ, ತಹಸೀಲ್ದಾರ್ ಕಛೇರಿ, ಮುದೋಳ, ಮುದೋಳ ತಾ: ಬಾಗಲಕೋಟೆ ಜಿಲ್ಲೆ,** ಇವರ ವಿರುದ್ಧ

<u>ಮೊ.ಸಂಖ್ಯೆ: 03/2016</u>**ಕ್ಕೆ** ಸಂಬಂಧಿಸಿದಂತೆ, ಈಗಾಗಲೇ ಇಲಾಖಾ ವಿಚಾರಣೆಯನ್ನು **"ಮಾನ್ಯ ಶಿಸ್ತು ಪ್ರಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ಬಾಗಲಕೋಟೆ",** ಇವರು ತನ್ನ ಆದೇಶ ಸಂಖ್ಯೆ: ಕಂಶಾ/ಡಿಪಿಇ/ಸಿಆರ್-02/2017-18 ದಿನಾಂಕ: 18/05/2018 ರಂತೆ ಇಲಾಖಾ ವಿಚಾರಣೆ ಪ್ರಾರಂಭಿಸಿರುತ್ತಾರೆ. ಹಾಗಾಗಿ, ಸದರಿ 1ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಟ್ಟಿರುತ್ತದೆ.

10. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರಾದ **ಶ್ರೀ ಸುಹಾಸ ಶಂಕರ ಇಂಗಳೆ, ತಹಶೀಲ್ದಾರ್, ಮುದೋಳ, ಮುದೋಳ ತಾ: ಬಾಗಲಕೋಟೆ ಜಿ: ಇವರು** ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

11. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರಾದ **ಶ್ರೀ ಸುಹಾಸ ಶಂಕರ ಇಂಗಳೆ, ತಹಶೀಲ್ದಾರ್, ಮುದೋಳ, ಮುದೋಳ ತಾ: ಬಾಗಲಕೋಟೆ ಜಿ:** ಇವರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

26/4/22

**(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)**
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು